ರಚಿಸುವ ಚಿತ್ರ ಲಿಥೋಗ್ರಾಫ್ ತಟ್ಟೆಗಳ ಮೇಲೆ ರಚಿಸಬೇಕಾಗಿತ್ತು. ತಾವೇ ವಿಧವಿಧವಾದ ಬಣ್ಣಗಳ ಮಿಶ್ರಣದ ಸಂಶೋಧನೆಯನ್ನು ಮಾಡಿ ಅಣ್ಣನವರು ಕಡೆಗೂ ಮಿಸ್ಟರ್ ಸ್ನೈಚರ್ ಒಪ್ಪುವಂತಹ ಚಿತ್ರಪಟವನ್ನು ರಚಿಸಿಯೇ ಬಿಟ್ಟರು.

ಈ ರೀತಿ ಮುದ್ರಿಸಿದ ಮೊದಲ ಚಿತ್ರ ಅಣ್ಣನವರ 'ಶಕುಂತಲೆಯ ಜನನ' ಕೃತಿ. ಸಾವಿರಾರು ಪ್ರತಿಗಳು ಮಾರಾಟವಾದಾಗ ಮುದ್ರಣಾಲಯಕ್ಕೆ ಹಣ ಸಹಾಯ ಮಾಡಿದ ಮಾಖನ್‌ಜೀಗೆ ತುಂಬಾ ಸಂತಸ. ಈ ನಡುವೆ ಅಣ್ಣನವರಿಗೆ ಚಿಕಾಗೋ ಚಿತ್ರಪ್ರದರ್ಶನದಿಂದ ಚಿತ್ರಗಳನ್ನು ಕಳುಹಿಸಬೇಕೆಂದು ಕರೆ ಬಂದಿತು. ಈ ಆಹ್ವಾನದ ಹಿಂದೆ ಇದ್ದವರು ಮಹಾರಾಜ ಸಯ್ಯಾಜಿರಾವ್.

ಒಂದು ದಿನ ಗೋಪಾಲಕೃಷ್ಣ ಗೋಖಲೆ ನಮ್ಮ ಸ್ಟುಡಿಯೋಗೆ ಬಂದರು. ಕಪ್ಪು ನಿಲುವಂಗಿ, ಕೆಂಪು ಮರಾಠಿ ಶೈಲಿಯ ರುಮಾಲು, ಚಿನ್ನದ ರಿಂ ಇರುವ ಕನ್ನಡಕ ಅವರ ಗೌರವರ್ಣವನ್ನು ಎತ್ತಿ ಹಿಡಿದಿದ್ದವು. ಅಣ್ಣನವರ ಚಿತ್ರಗಳನ್ನು ನೋಡಿ ಅವರು ತುಂಬಾ ಸಂತಸಪಟ್ಟು 'ಇವು ಖಂಡಿತ ಚಿಕಾಗೋದಲ್ಲಿ ಬಹುಮಾನ ಪಡೆಯುತ್ತವೆ' ಎಂದು ಹಾರೈಸಿದರು.

'ರಾಜಾ ಸಾಹೇಬರೇ ನಿಮಗೆ ಮುದ್ರಣಾಲಯ, ಸ್ಟುಡಿಯೊ ಕೆಲಸ (ಚಿತ್ರರಚನೆ) ಎರಡೂ ಸರಿದೂಗಿಸಿಕೊಂಡು ಹೋಗುವುದು ಕಷ್ಟಕರವಲ್ಲವೆ? ಸಮಯವನ್ನು ಹೇಗೆ ಸರಿಹೊಂದಿಸಿಕೊಳ್ಳುತ್ತೀರಿ?' ಎಂದು ಕೇಳಿದರು. ಆಗ ಅಣ್ಣನವರು ನನ್ನ ಹೆಗಲ ಸುತ್ತ ಕೈಹಾಕಿ ಹತ್ತಿರಕ್ಕೆಳೆದುಕೊಂಡು "ನನ್ನ ತಮ್ಮ ರಾಜವರ್ಮನಿರುವಾಗ ನನಗೇನೂ ಅಂತಹ ಕಷ್ಟ ಎನಿಸುವುದಿಲ್ಲ. ನಾನು ಮುಖ್ಯ ಪಾತ್ರಗಳನ್ನು ರಚಿಸುತ್ತೇನೆ. ರಾಜ ಹಿನ್ನೆಲೆ ತುಂಬುತ್ತಾನೆ. ಈಗ ನೋಡಿ, ಈ ಊರ್ವಶಿಪುರೂರವ ಚಿತ್ರದ ಪ್ರಿಂಟ್ ಹಾಕುತ್ತಿದ್ದೇನೆ. ರಾಜ ನನಗೆ ಸಹಾಯ ಮಾಡುತ್ತಿದ್ದಾನೆ." ಜೊತೆಗೆ ಧುರಂಧರ್, ಜೋಷಿ ಇಬ್ಬರೂ ಸಹಾಯಕ್ಕಿದ್ದಾರೆ" ಎಂದರು ತುಂಬು ಹೃದಯದಿಂದ. ಅಣ್ಣನವರ ಅಕ್ಕರೆ, ವಿಶ್ವಾಸವನ್ನು ಅತ್ಯಂತ ಹೆಚ್ಚು ಪಡೆದವನು ನಾನೇ. ಏಕೆಂದರೆ ನಾನು ಅಣ್ಣನನ್ನು ಬಿಟ್ಟು ಇದ್ದದ್ದೇ ನನಗೆ ನೆನಪಾಗುತ್ತಿಲ್ಲ. ಅಷ್ಟೊಂದು ನೆರಳಿನಂತೆ ಅಂಟಿಕೊಂಡುಬಿಟ್ಟಿದ್ದೆ!.

## ಸುಗಂಧ

ನಾನು ರವಿವರ್ಮನ ಮನೆಯಿಂದ ಹಿಂತಿರುಗಿದಾಗ ಮನೆಯ ವಾತಾವರಣ ಸರಿಯಿಲ್ಲವೆಂದು ತಂಗಿ ಕಮಲ ಕಣ್ಣನ್ನೆಯಿಂದ ತಿಳಿಸಿದಳು. ಚಿಕ್ಕಮ್ಮ ಬಕಾಬಾಯಿಗೆ ಯಾರು ಕಿವಿಚುಚ್ಚಿದ್ದಾರೆ ಎಂದು ನನಗೆ ಅರಿವಾಗಲು ತಡವಾಗಲಿಲ್ಲ. ರಘು ಬಂದು ಹೋಗಿದ್ದಾನೆಂದು ಅರಿವಾಯ್ತು. ನಾನೆಣಿಸಿದಂತೆಯೇ ಚಿಕ್ಕಮ್ಮ ನನ್ನ ಕೋಣೆಗೆ ಬಂದು ಕೂಗಾಡತೊಡಗಿದಳು. 'ನನ್ನ ಮನೆಯ ಮರ್ಯಾದೆ ಬೀದಿ ಪಾಲಾಗುವುದನ್ನು ನೋಡುತ್ತಾ ನಾನಿನ್ನೂ ಬದುಕಿದ್ದೇನಲ್ಲ! ಹಜಾಮನ ಅಂಗಡಿಯಲ್ಲಿ ನೇತಾಡುತ್ತಿರುವ ಈ ಪಟಗಳನ್ನು ನೋಡಿ ಕಣ್ತುಂಬಿಕೋ' ಎನ್ನುತ್ತ ಮೂರು ಕ್ಯಾಲೆಂಡರ್‌ಗಳನ್ನು ನನ್ನ ಮೇಲೆ ಎಸೆದಳು. ಅದು ಊರ್ವಶಿ ಪುರೂರವ, ಮೇನಕೆ ವಿಶ್ವಾಮಿತ್ರ, ಶಂತನು ಮತ್ಸ್ಯಗಂಧಿಯರ ಚಿತ್ರಪಟಗಳು. ಚಿಕ್ಕಮ್ಮನ ಕೋಪಕ್ಕೆ ಕಾರಣ ಅದರಲ್ಲಿದ್ದ ನನ್ನ ಅರೆನಗ್ನ ರೂಪ. ನಾನೇನೂ ಮಾತನಾಡದೆ ಸುಮ್ಮನಿದ್ದೆ. ಮತ್ತೆ ಅವಳೇ ಹೇಳಿದಳು. 'ನೀನು ರೂಪದರ್ಶಿಯಾಗಿ ನಿಲ್ಲುತ್ತಿದ್ದ ಎಷ್ಟು ದೊಡ್ಡ ತಪ್ಪು ಎಂದು ತಿಳಿಯಿತೇ? ನಿನ್ನ ಸೌಂದರ್ಯವನ್ನು ಅವನು ಹೇಗೆ ದುರುಪಯೋಗಪಡಿಸಿಕೊಂಡು ದುಡ್ಡು ಮಾಡಿಕೊಳ್ಳುತ್ತಿದ್ದನೆಂದು ನೋಡಿದೆಯಾ?' ಈಗ ನಾನು ಮಾತನಾಡಿದೆ 'ಅವರನ್ನು ಮುದ್ರಣ ಉದ್ಯಮಕ್ಕೆ ತೊಡಗಿರೆಂದು ಪ್ರೇರೇಪಿಸಿದವಳೇ ನಾನು. ಅವರ ಲಕ್ಷ್ಮೀ, ಸರಸ್ವತಿ, ಪಾರ್ವತಿ ದೇವರ ಚಿತ್ರಗಳು ಮನೆಮನೆಯಲ್ಲಿ ರಾರಾಜಿಸುವಂತೆ, ಈ ಚಿತ್ರಗಳೂ ಇವೆ. ಕಲೆ, ಸೌಂದರ್ಯ ನೋಡುವವರ ಕಣ್ಣಿನಲ್ಲಿದೆ, ಚಿತ್ರದಲ್ಲಲ್ಲ.'

ಚಿಕ್ಕಮ್ಮ ಬುಸುಗುಟ್ಟುತ್ತಾ 'ನೀನು ಹೇಗಾದರೂ ಹಾಳಾಗಿ ಹೋಗು, ಆದರೆ ಇಂದಿನಿಂದ ನಿನ್ನ ತಂಗಿಯನ್ನು ನಿನ್ನೊಂದಿಗೆ ಆ ಸ್ಟುಡಿಯೋದವನ ಮನೆಗೆ ಕಳುಹಿಸುವುದಿಲ್ಲ. ಮಾಣಿಕಚಂದನೆಂಬ ಧನಾಢ್ಯ ಮುದುಕ ಅವಳನ್ನು ಇಷ್ಟಪಟ್ಟಿದ್ದಾನೆ. ಅವನಿಗೆ ಪಾರ್ಶ್ವವಾಯು ಬಡಿದಿದ್ದಾರೇನಾಯ್ತು? ನಾವಿರುವ ಈ ಬಂಗಲೆಯನ್ನು ನಮಗೇ ಬರೆದುಕೊಡುತ್ತಾನೆ. ಅವಳನ್ನು ಅವನಿಗೇ ಮದುವೆ ಮಾಡಿಕೊಡುತ್ತೇನೆ.' ನಾನು ಏನು ಪ್ರತಿ ಹೇಳಿದರೂ ಚಿಕ್ಕಮ್ಮ ಹಿಡಿದ ಹಠವನ್ನೇ ಸಾಧಿಸಿದಳು. ಕಮಲಳನ್ನು ಆ ಹೆಳವನಿಗೆ ಕೊಟ್ಟು ಮದುವೆ ಮಾಡಿದಳು.

ನಾನೊಬ್ಬಳೇ ರವಿವರ್ಮನ ಸ್ಟುಡಿಯೋಗೆ ಹೋದಾಗ ಅವನಿಗೆ ಗಾಬರಿಯಾಯಿತು. 'ಕಮಲೆಗೆ ಏನಾಯ್ತು?' ಎಂದ. ನಡೆದದ್ದು ಹೇಳಿದೆ, 'ಬೀದಿಬೀದಿಗಳಲ್ಲಿ ನನ್ನ ಅರೆನಗ್ನ ಚಿತ್ರಗಳು ಇರುವಾಗ ಸಮಾಜವನ್ನು ಹೇಗೆ ಎದುರಿಸಬೇಕೋ ನನಗೀಗ ತಿಳಿಯದಾಗಿದೆ' ಎಂದೆ. ರವಿವರ್ಮನಿಗೂ ಅಪರಾಧಿ ಪ್ರಜ್ಞೆ ಕಾಡಿತು. ನನ್ನನ್ನು ತೋಳ್ಗಳಲ್ಲಿ ಹಿಡಿದು ಹೇಳಿದ 'ಮುದ್ರಿಸುವ ಭರಾಟೆಯಲ್ಲಿ ನಾನಿದನ್ನು ಯೋಚಿಸಲೇ ಇಲ್ಲ, ನನ್ನಿಂದ ನಿನ್ನ ನೆಮ್ಮದಿಯೇ ಹಾಳಾಯಿತು. ನನ್ನನ್ನು ಕ್ಷಮಿಸು ಸುಗಂಧ' ಎಂದ. ಮತ್ತೆ ಹೇಳಿದ 'ಈಗಲೂ ಕಾಲ ಮಿಂಚಿಲ್ಲ, ನೀನು ಸಮ್ಮತಿಸಿದರೆ ನಾವಿಬ್ಬರೂ ಮದುವೆಯಾಗಿಬಿಡೋಣ. ನನ್ನ ಖಾಲಿ ಕ್ಯಾನ್ವಾಸ್‌ನಂತಹ ಜೀವನಕ್ಕೆ ಬಣ್ಣ ತುಂಬು ಸುಗಂಧ. ನಿನ್ನ ಮೇಲಿನ ಅಪವಾದವೂ ದೂರವಾಗುವುದು' ಎಂದ. ಕ್ಷಣಹೊತ್ತು ಯೋಚಿಸಿ ನಸುನಕ್ಕು ಹೇಳಿದೆ 'ನೀನು ತುಂಬಾ ಅಮಾಯಕ ನೀನು ಹೇಳುವುದೇನೂ ಸಾಧ್ಯವಿಲ್ಲ.'

'ಏಕಾಗಬಾರದು?'

'ನಮ್ಮಿಬ್ಬರ ಸಾಮಾಜಿಕ ಸ್ಥಿತಿಗತಿ, ಅಂತಸ್ತುಗಳ ನಡುವಿನ ಅಂತರ ಬಹಳ ದೊಡ್ಡದು. ನೀನು ನನ್ನನ್ನು ದೇವದಾಸಿಯರ ಕೊಳಕು ಪ್ರದೇಶದಿಂದ ಆರಿಸಿಕೊಂಡು ಗರ್ಭಗುಡಿಯ ಪೀಠದಲ್ಲಿ ಇರಿಸಿ ದೇವಿಯಂತೆ ಆರಾಧಿಸಿದೆ. ನಿನ್ನವಳನ್ನಾಗಿ ಮಾಡಿಕೊಂಡೆ ನನಗಷ್ಟೇ ಸಾಕು. ನಿನ್ನಂತಹ ರಾಜ ಮನೆತನದ ಕಲಾವಿದನ ಪತ್ನಿಯಾಗಿ ನಿನ್ನ ಮನೆತನಕ್ಕೆ, ಹೆಸರಿಗೆ ಕಳಂಕ ತರುವ ಇಚ್ಛೆ ನನಗಿಲ್ಲ. ನಾನು ನಿನ್ನನ್ನು ವರಿಸದಿದ್ದರೂ ನಾನು ಎಂದೆಂದೂ ನಿನ್ನವಳೇ' ಎನ್ನುತ್ತಾ ಅವನ ಎದೆಗೊರಗಿದೆ. ನನ್ನ ಕೂದಲಲ್ಲಿ ಬೆರಳಾಡಿಸುತ್ತಾ ಮುದ್ದಿಸತೊಡಗಿದ ರವಿವರ್ಮ.

## ರಾಜವರ್ಮ

ನಾನಾಗಲೀ, ಅಣ್ಣನವರಾಗಲೀ ಕನಸಿನಲ್ಲೂ ಊಹಿಸದ ಘಟನೆಯೊಂದು ನಡೆದುಹೋಗಿತ್ತು. ನಡುಗುವ ಕೈಗಳಿಂದ ಪತ್ರವನ್ನು ಸಹಿಗಾಗಿ ಅಣ್ಣನ ಮುಂದಿಟ್ಟೆ. ಅಣ್ಣನ ಪತ್ರ ವ್ಯವಹಾರವನ್ನೆಲ್ಲಾ ನಾನೇ ನೋಡಿಕೊಳ್ಳುತ್ತಿದ್ದುದರಿಂದ ಅವರ ಪರವಾಗಿ ಸಹಿ ಹಾಕುವ ಅಧಿಕಾರವನ್ನು ನನಗೇ ಕೊಟ್ಟಿದ್ದರು. 'ಇದೇಕೆ ರಾಜಾ? ನನ್ನ ಸಹಿ? ನೀನೇ ಹಾಕಬಾರದೆ?' 'ಇದು ಕೋರ್ಟ್‌ನ ಸಮನ್ಸ್ ಅಣ್ಣ' ಎಂದೆ. ಅರ್ಥವಾಗದೆ ನನ್ನ ಮುಖ ನೋಡಿದರು ಅಣ್ಣ. ನಾನು ವಿವರಿಸಿದೆ 'ನಿಮ್ಮ ವಿರುದ್ಧ ಒಂದು ಕೇಸ್ ಹಾಕಿದ್ದಾರೆ ಅಣ್ಣ. ನೀವು ಹಿಂದೂ ದೇವ ದೇವಿಯರ ಚಿತ್ರಗಳನ್ನು ಮನೆಮನೆಗಳಲ್ಲೂ, ಬೀದಿಬೀದಿಗಳಲ್ಲೂ ಹಾರಾಡಿಸಿ, ಅವರ ಪವಿತ್ರತೆಗೆ ಕುಂದುತಂದಿದ್ದೀರಂತೆ. ಅಲ್ಲದೆ..' 'ಅಲ್ಲದೆ...?'

ಆ ದೇವದೇವಿಯರನ್ನು ಅರೆನಗ್ನವಾಗಿ ಚಿತ್ರಿಸಿ, ಅವರನ್ನು ಅಗೌರವಿಸಿದ್ದೀರಿ, ಹಿಂದೂಗಳ ಭಾವನೆಗಳನ್ನು ಘಾಸಿಗೊಳಿಸಿದ್ದೀರಿ ಎಂದು ಬ್ರಹ್ಮಜ್ಞಾನ ಮಂಡಲಿಯ ಪರವಾಗಿ ವೇದ ಶಿರೋಮಣಿ ಚಿಂತಾಮಣಿ ಶಾಸ್ತ್ರಿಗಳು ಕೇಸ್ ಹಾಕಿದ್ದಾರೆ.' ಅಣ್ಣನವರು ಕುಂಚ ಕೆಳಗಿರಿಸಿ 'ಎಲ್ಲಿ ಸಹಿ ಮಾಡಬೇಕು ಹೇಳು' ಎನ್ನುತ್ತಾ ಸಹಿ ಮಾಡಿದರು. 'ಅಣ್ಣಾ! ಇದು ಅಷ್ಟೊಂದು ಹಗುರವಾದ ವಿಚಾರವಲ್ಲ. ನಾಳೆ ಎಲ್ಲಾ ಪತ್ರಿಕೆಗಳಲ್ಲೂ ಪ್ರಕಟವಾಗುತ್ತದೆ.'

'ಅದಕ್ಕೆ...?'

ನಮ್ಮೊಂದಿಗೇ ಇದ್ದ ಅಣ್ಣನವರ ಮಗ ರಾಮವರ್ಮ ಹೇಳಿದ 'ನಾವು ಬೀದಿಯಲ್ಲಿ ಮುಖ ತೋರಿಸದಂತಾಗುತ್ತದೆ.'

ಅಣ್ಣನವರ ಗೆಳೆಯ ರಾಮಯ್ಯ ಕೂಡ ಹೌದೆಂದರು. 'ಅಂತಹ ತಪ್ಪೇನು ಮಾಡಿದ್ದೇನೆ ನಾನು, ಕ್ಷಮೆ ಕೇಳಲು' ಅಣ್ಣ ಕನಲಿದರು.

'ಅಪ್ಪಾ, ನೀವೇಕೆ ಹೆದರುತ್ತೀರಿ? ದಾದಾಬಾಯಿ ನವರೋಜಿ, ಜಸ್ಟಿಸ್ ರಾನಡೆ, ಗೋಖಲೆ, ಗವರ್ನರರೂ ಎಲ್ಲರೂ ನಿಮಗೆ ಬೇಕಾದವರೇ. ಅವರು ಒಂದು ಮಾತು ನಿಮ್ಮ ಪರ ಮಾತನಾಡಿದರೆ ಕೇಸ್ ಬಿದ್ದುಹೋಗುತ್ತದೆ.'

ಅಣ್ಣ ಜೋರಾಗಿ ನಕ್ಕು ರಾಮವರ್ಮನ ಬೆನ್ನುತಟ್ಟಿದರು 'ಕಂದಾ! ಇದು ನಿನ್ನ ತಂದೆ ರವಿವರ್ಮನ ವಿರುದ್ಧ ಬಂದ ಸವಾಲಲ್ಲ. ಇದು ಕಲೆಗೇ ಎಸೆದಿರುವ ಸವಾಲು. ಅದನ್ನು ನಾವು ಒಪ್ಪಿಕೊಳ್ಳಬೇಕು. ಕಲೆ ಎಂದೂ ಕಲುಷಿತವಲ್ಲ, ಅದು ಯಾವಾಗಲೂ ಶುದ್ಧ; ಅನನ್ಯ. ಅದನ್ನು ಪ್ರತಿಯೊಬ್ಬ ಕಲಾಕಾರನೂ ತಲೆಯೆತ್ತಿಯೇ ಹೇಳಬೇಕು' ಎಂದರು. (ಸಶೇಷ)